## ಪವಿತ್ರ ಪತ್ರಮಾಲೆ

# ಸ್ವಾಮಿ ಶಿವಾನಂದಜಿ ಅವರ ಒಂದು ಪತ್ರ



ರಾಮಕೃಷ್ಣ ಮಿಷನ್ ಸೇವಾಶ್ರಮ,
ಕನ್‌ಖಲ್, ಸಹರಾನ್‌ಪುರ್, ಉತ್ತರಪ್ರದೇಶ
೧೫ ಜುಲೈ, ೧೯೧೨

ಪ್ರೀತಿಯ...

ನಿನ್ನ ಪತ್ರ ನನಗೆ ತಲುಪಿದೆ. ನೀನು ಅದರಲ್ಲಿ ಬರೆದುದೆಲ್ಲವನ್ನೂ ನಾನು ಗ್ರಹಿಸಿದ್ದೇನೆ. ನೀನೀಗ ಕೈಗೊಂಡಿರುವ ಆಧ್ಯಾತ್ಮಿಕ ಸಾಧನೆಯನ್ನು – ಅಂದರೆ, **ಧ್ಯಾನ** ಮತ್ತು **ಭಗವನ್ನಾಮದ ಉಚ್ಚಾರಣೆ** – ಇವುಗಳನ್ನು ಮುಂದುವರೆಸಿಕೊಂಡು ಹೋಗು. ಇದರಲ್ಲಿ ಯಾವ ಹಾನಿಯೂ ಇಲ್ಲ. ಭಗವಂತನ ಪಟದ ಮುಂದೆ ಕುಳಿತುಕೋ. ನಿನ್ನ ಕಣ್ಣುಗಳನ್ನು ಮುಚ್ಚಿಕೋ. ನಿನ್ನ ಹೃದಯದಲ್ಲಿಯೇ ಪ್ರಭುವು ಸನ್ನಿಹಿತನಾಗಿರುವನೆಂದು ಭಾವಿಸಿಕೋ. ಅನಂತರ ಹೃದಯಪೂರ್ವಕವಾದ ಪ್ರೇಮದಿಂದ ಆತನನ್ನು ಪ್ರಾರ್ಥಿಸಿಕೋ. ಭಗವಂತನನ್ನು ಈ ರೀತಿ ಚಿಂತಿಸು: ಅವನು ಸಚ್ಚಿದಾನಂದ ಸ್ವರೂಪನಾಗಿದ್ದಾನೆ. ಆದರೆ, ಪ್ರಾಚೀನ ಕಾಲದಲ್ಲಿ ಮಾಡಿದಂತೆಯೇ, ಈಗಲೂ ಅವತಾರದ ರೂಪದಲ್ಲಿ ನಮಗೆಲ್ಲ ಮುಕ್ತಿಯ ಮಾರ್ಗವನ್ನು ತೋರಲು ಮಾನವದೇಹಧಾರಿಯಾಗಿದ್ದಾನೆ. ಈ ವರ್ತಮಾನ ಕಾಲದಲ್ಲಿ ಅವನೇ ಶ್ರೀರಾಮಕೃಷ್ಣ ರೂಪವನ್ನು ತಳೆದಿದ್ದಾನೆ. ಅವರು ಮಾನವ ಹೃದಯದಲ್ಲಿ **ಭಗವತ್ಪ್ರೇಮ** ಮತ್ತು **ಶ್ರದ್ಧೆ**ಗಳನ್ನು ಉದ್ದೀಪನಗೊಳಿಸುತ್ತಿದ್ದಾರೆ. ಅವರು ಹಿಂದೆ ಅದನ್ನು ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ, ಮುಂದೆಯೂ ಬಹಳ ಜನರಿಗೆ ಈ ರೀತಿ ಅನುಗ್ರಹ ಮಾಡಲಿದ್ದಾರೆ. ಅವರು ನಿನ್ನ ತಂದೆತಾಯಿ, ಗುರು ಮತ್ತು ಸ್ನೇಹಿತ. ಅವರೇ ಎಲ್ಲವೂ ಆಗಿದ್ದಾರೆ. ಅವರನ್ನು ಈ ರೀತಿಯಾಗಿ ಚಿಂತಿಸುತ್ತ, ಅವರಲ್ಲಿ ಶರಣುಹೋಗು. ಈ ಭಾವನೆಯನ್ನು ಎಲ್ಲ ಕಾಲಕ್ಕೂ ಕಾಪಾಡಿಕೊ. ಇದು ಭಗವಂತನಲ್ಲಿ ನಿನ್ನ ಪ್ರೇಮವನ್ನೂ ಶ್ರದ್ಧೆಯನ್ನೂ ಅಧಿಕಗೊಳಿಸುವುದು. ಇದು ಖಂಡಿತ ಎನ್ನುವುದನ್ನು ತಿಳಿದುಕೋ. ನೀನು ಭಗವಂತನ ನಾಮವನ್ನು ಉಚ್ಚರಿಸುವಾಗ, ಅದೇ ಸಮಯದಲ್ಲಿ, ಆತನ ರೂಪವನ್ನು ಖಂಡಿತ ಧ್ಯಾನಮಾಡಲೇಬೇಕು. ಆತನ ಸಾನ್ನಿಧ್ಯವನ್ನು ನಿನ್ನ ನಾಭಿ, ಹೃದಯ, ಎರಡು ಕಣ್ಣುರೆಪ್ಪೆಗಳ ನಡುವೆ ಮತ್ತು ನಿನ್ನ ಶಿರೋಭಾಗದಲ್ಲಿ ಭಾವಿಸಿಕೋ. ಭಗವಂತನನ್ನು ಪರಿಶುದ್ಧ ಭಕ್ತಿಗಾಗಿ ಪ್ರಾರ್ಥಿಸಿಕೊ. ಹೀಗೆ ಕೇಳಿಕೊಳ್ಳುವುದು, ಎಲ್ಲರಿಗಾಗಿ ಎಲ್ಲವನ್ನೂ ಕೇಳಿಕೊಳ್ಳುವುದಕ್ಕೆ ಸಮನಾದುದೇ ಆಗಿದೆ. ನೀನು ಶ್ರೀರಾಮಕೃಷ್ಣರಲ್ಲಿ ಪ್ರಾಮಾಣಿಕವಾಗಿ ಶರಣುಹೊಂದಿದ್ದೇ ಆದರೆ, ನೀನು ಕೆಟ್ಟಮಾರ್ಗದಲ್ಲಿ ಹೋಗದಂತೆ ಅವರೇ ಖಂಡಿತವಾಗಿಯೂ ಎಲ್ಲ ಸಮಯದಲ್ಲಿಯೂ ರಕ್ಷಿಸುತ್ತಾರೆ. ಆದ್ದರಿಂದಲೇ, ಶ್ರೀರಾಮಕೃಷ್ಣರ ದಾಸರೇ ಆಗಿರುವ ಸ್ವಾಮಿ ಶಾರದಾನಂದರು, ನೀನು ಹಿಡಿದಿದ್ದ ತಪ್ಪುಮಾರ್ಗದಿಂದ ನಿನ್ನನ್ನು ಈಗ ರಕ್ಷಿಸಿದ್ದಾರೆ. ಗುರುದೇವರಲ್ಲಿ ಸಂಪೂರ್ಣ ಶರಣಾಗಿರುವ ಭಕ್ತನು ಯಾವುದಕ್ಕೂ ಹೆದರುವ ಆವಶ್ಯಕತೆಯಿಲ್ಲ. ಅಂತಹ ಭಕ್ತನು ತಪ್ಪುದಾರಿ ಹಿಡಿಯಬಹುದು. ಆದರೆ ಗುರುದೇವರು ಖಂಡಿತವಾಗಿಯೂ ಅವನನ್ನು ಸರಿಯಾದ ದಿಕ್ಕಿನಲ್ಲಿ ಹೆಜ್ಜೆಗಳನ್ನು ಇಡಲು ಮಾರ್ಗದರ್ಶನ ಮಾಡಿ, ರಕ್ಷಿಸುತ್ತಾರೆ. ತಾಳ್ಮೆಯಿಂದಿರು, ನೀನೆಲ್ಲಿದ್ದೀಯೋ ಅಲ್ಲೇ ಇದ್ದುಕೊಂಡಿರು. ಭಗವಂತನಲ್ಲಿ ನಿನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೋ. ಆತನು ನಿನ್ನ ಎಲ್ಲ ಕಷ್ಟಗಳನ್ನೂ ನಿವಾರಣೆ ಮಾಡುವನು. ಹಾಗೂ ಎಲ್ಲವೂ ನಿನಗೆ ಅನುಕೂಲಕರವಾಗುವಂತೆ ಮಾಡುವನು. ನೀನು ಬಹಳ ಬೇಗನೇ ಭಕ್ತರ ಸತ್ಸಂಗವನ್ನು ಪಡೆದುಕೊಳ್ಳುವೆ ಮತ್ತು ಎಲ್ಲವೂ ನಿನಗೆ ಅನುಕೂಲಕರವಾಗಿ ಪರಿಣಮಿಸುವುದು. ಇದರಿಂದ ನಿನಗೆ ತೃಪ್ತಿಯಾಗುವಷ್ಟು ಭಗವತ್ಸೇವೆಯನ್ನು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ತಾಳ್ಮೆಗೆಡಬೇಡ.

ಸ್ವಾಮಿ ಬ್ರಹ್ಮಾನಂದಜಿ ಅವರಿಗೆ ನಿನ್ನ ವಿಷಯದಲ್ಲಿ ಸ್ವಲ್ಪವೂ ಅಸಮಾಧಾನವಿಲ್ಲ. ಅವರೊಬ್ಬರು ಮಹಾತ್ಮರು, ದಯಾಮಯರು. ಇಲ್ಲಿರುವವರೆಲ್ಲರೂ ಶುಭಹರಕೆಗಳನ್ನು ಕಳಿಸುವುದರಲ್ಲಿ ನನ್ನೊಡನೆ ಸೇರಿಕೊಂಡಿದ್ದಾರೆ.

ನಿನ್ನ ವಿಶ್ವಾಸಿ
ಶಿವಾನಂದ

# ಭಗವದ್ಗೀತಾ ತತ್ತ್ವಸೌರಭ



## ಕಾಮ ಮತ್ತು ಕ್ರೋಧ

**ಮ**ನುಷ್ಯನು ತನಗಿಚ್ಛೆಯಿಲ್ಲದೆ ಇದ್ದರೂ ಬಲಾತ್ಕಾರವಾಗಿ ದುಷ್ಕೃತ್ಯಗಳಲ್ಲಿ ತೊಡಗುತ್ತಾನಲ್ಲ, ಇದಕ್ಕೆ ಕಾರಣವೇನು? ಎಂದು ಅರ್ಜುನನು ಶ್ರೀಕೃಷ್ಣನನ್ನು ಕೇಳುತ್ತಾನೆ (೩:೩೬). ಮಾನವನ ಸ್ವಾಭಾವಿಕ ಗುಣ ಒಳ್ಳೆಯತನ; ಅನೇಕ ಬಾಹ್ಯ ಮತ್ತು ಆಂತರಿಕ ಕಾರಣಗಳಿಂದಾಗಿ ಆ ಗುಣ ಮಸುಕಾಗುತ್ತದೆ, ಮಾನವನು ದುರ್ನಡತೆಗೆ ಒಳಗಾಗುತ್ತಾನೆ. ಆರೋಗ್ಯವಂತವಾಗಿರುವುದು ದೇಹದ ಸ್ವಾಭಾವಿಕ ಸ್ಥಿತಿ, ಆದರೆ ಅನೇಕ ಕಾರಣಗಳಿಂದಾಗಿ ಈ ಸ್ವಾಭಾವಿಕ ಸ್ಥಿತಿ ಕೆಟ್ಟು ದೇಹವು ಕಾಯಿಲೆಗೆ ಒಳಗಾಗುತ್ತದೆ. ಸತ್ಯವನ್ನೇ ಹೇಳುವುದು, ಕದಿಯದಿರುವುದು, ಇತರರಿಗೆ ನೋವನ್ನುಂಟುಮಾಡದಿರುವುದು – ಇವೆಲ್ಲವೂ ಸ್ವಾಭಾವಿಕ ಗುಣಗಳು. ಇವುಗಳಿಗೆ ವಿರುದ್ಧವಾಗಿರುವುದೆಲ್ಲ ಅಸ್ವಾಭಾವಿಕ ಸ್ಥಿತಿ. ಅನೇಕ ಸಂದರ್ಭಗಳಲ್ಲಿ ಸಾಮಾಜಿಕ ಪರಿಸ್ಥಿತಿಗಳು ಮನುಷ್ಯನನ್ನು ಸ್ವಾಭಾವಿಕವಾಗಿ ವರ್ತಿಸಲು ಬಿಡುವುದೇ ಇಲ್ಲ. ತನ್ನಿಚ್ಛೆಯಿಲ್ಲದಿದ್ದರೂ ಅಸ್ವಾಭಾವಿಕವಾಗಿ ಅವನು ವರ್ತಿಸುತ್ತಾನೆ. ಮುಂದೆ ಈ ವರ್ತನೆಗಳೇ ಸಂಸ್ಕಾರಗಳಾಗಿ ಅವು ಅವನನ್ನು ದುರ್ನಡತೆಯೆಡೆಗೆ ತಳ್ಳುತ್ತವೆ. ಆಗ ಮನುಷ್ಯನು ತನ್ನ ಇಚ್ಛೆಗೆ ವಿರುದ್ಧವಾಗಿಯೂ, ಬಲಾತ್ಕಾರವಾಗಿಯೂ ದುಷ್ಕೃತ್ಯಗಳಲ್ಲಿ ತೊಡಗುತ್ತಾನೆ. ಈ ರೀತಿ ಪರಿಸ್ಥಿತಿಯ ಒತ್ತಡಕ್ಕೆ ಬಲಿಯಾಗಲು ಕಾರಣವೇನು?

ಈ ಮೇಲಿನ ಪ್ರಶ್ನೆಗೆ ಉತ್ತರವಾಗಿ ಶ್ರೀಕೃಷ್ಣನು, ಈ ರೀತಿ ಮನುಷ್ಯನು ಪಾಪಾಚರಣೆಗಳಲ್ಲಿ ತೊಡಗುವುದಕ್ಕೆ ಕಾರಣ 'ಕಾಮ' ಮತ್ತು 'ಕ್ರೋಧ' ಎಂದು ಹೇಳುತ್ತಾನೆ. ಮನಶ್ಶಾಸ್ತ್ರದ ಭಾಷೆಯಲ್ಲಿ 'ಕಾಮ' ಎಂದರೆ ಭೋಗತತ್ತ್ವ (pleasure principle ). ಈ ಭೋಗಾಸಕ್ತಿಯು ಮನುಷ್ಯನ ಸ್ವಾಭಾವಿಕ ಪ್ರವೃತ್ತಿಯಾಗಿದೆ. ಇದನ್ನು ಒಂದು ನೈತಿಕ ಕಟ್ಟುಪಾಡಿನ ಒಳಗೆ ಅನುಭವಿಸುವುದು ತಪ್ಪೇನಲ್ಲ. ಶ್ರೀಕೃಷ್ಣನೇ ಮುಂದೆ, **'ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ'** (೭: ೧೧) "ಧರ್ಮಕ್ಕೆ ಅವಿರುದ್ಧವಾದ ಕಾಮವೂ ನಾನಾಗಿರುತ್ತೇನೆ" ಎಂದು ಹೇಳುತ್ತಾನೆ. ಆದರೆ ಈ ಪ್ರವೃತ್ತಿಯನ್ನು ನಿಗ್ರಹಿಸದಿದ್ದರೆ ಅದು ಧರ್ಮದ ಕಟ್ಟೆಯನ್ನು ಒಡೆದುಕೊಂಡು ಹೋಗುತ್ತದೆ. ಈ ಭೋಗಪ್ರವೃತ್ತಿಯನ್ನು ನಿಗ್ರಹಿಸುವುದು ಆಧ್ಯಾತ್ಮಿಕ ಪ್ರಗತಿಗೆ ಮಾತ್ರ ಅತ್ಯವಶ್ಯಕವಾಗಿರುವುದಿಲ್ಲ, ಸಂಸ್ಕೃತಿ ಮತ್ತು ನಾಗರಿಕತೆಯ ಮುನ್ನಡೆಗೂ ಇದು ಅವಶ್ಯಕ. ಯಾವ ಬುಡಕಟ್ಟು ಜನಾಂಗದಲ್ಲಿ ಈ ಭೋಗಪ್ರವೃತ್ತಿಯ ನಿಗ್ರಹ ಜಾಸ್ತಿಯಿದೆಯೋ ಆ ಜನಾಂಗದವರು ನಾಗರಿಕತೆಯಲ್ಲಿ ಹೆಚ್ಚು ಮುಂದುವರಿದಿರುವುದು ಕಂಡುಬರುತ್ತದೆ ಎಂದು ಮಾನವಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಭೋಗಪ್ರವೃತ್ತಿಯನ್ನು ಉದಾತ್ತೀಕರಿಸಿದಾಗ ಅದು ಉತ್ತಮ ಸಂಸ್ಕೃತಿಯಾಗಿಯೂ ಆಧ್ಯಾತ್ಮಿಕಶಕ್ತಿಯಾಗಿಯೂ ಪರಿಣಮಿಸುತ್ತದೆ. ಪೆಟ್ರೋಲಿಯಂ ಅನ್ನು ಶುದ್ಧೀಕರಿಸುತ್ತಾ ಹೋದಂತೆ, ಹೆಚ್ಚು ಹೆಚ್ಚು ಉತ್ತಮಶಕ್ತಿಯಾಗಿ ಪರಿಣಮಿಸುತ್ತದೆ. ಹಾಗೆಯೇ ಈ ಭೋಗಾಸಕ್ತಿ ಕೂಡ.

ಈ ಭೋಗಾಸಕ್ತಿ ಅಥವಾ ಕಾಮವು ಜೀವನವನ್ನು ಪ್ರೀತಿಸುವ, ಅನುಭವಿಸುವ ಮತ್ತು ಮುಂದುವರಿಸುವ ಶಕ್ತಿಯಾದರೆ, ಕ್ರೋಧವು ಇದಕ್ಕೆ ವಿರುದ್ಧವಾದುದು. ಕ್ರೋಧವು ಜೀವನವನ್ನು ದ್ವೇಷಿಸುವ, ಧ್ವಂಸ ಮಾಡುವ ಪ್ರವೃತ್ತಿ. ವ್ಯಕ್ತಿಯು ನಿಃಸಾರ್ಥಕ, ಅರ್ಥಹೀನ ಜೀವನವನ್ನು ನಡೆಸತೊಡಗಿದರೆ, ಜೀವನದಲ್ಲಿ ಒಂದು ಉನ್ನತ ಆದರ್ಶವೇ ಇಲ್ಲದಿದ್ದಾಗ, ಅವನು ತನ್ನನ್ನೇ ದ್ವೇಷಿಸತೊಡಗುತ್ತಾನೆ. ಹಾಗೂ ಈ ಆತ್ಮದ್ವೇಷ ಹೊರಗಡೆ ಹಿಂಸಾತ್ಮಕ ಪ್ರವೃತ್ತಿಯಾಗಿ ವ್ಯಕ್ತವಾಗುತ್ತದೆ. ತನ್ನನ್ನು ದ್ವೇಷಿಸುವವನು ಇತರರನ್ನು ಪ್ರೀತಿಸಲು ಹೇಗೆ ಸಾಧ್ಯ? ತನ್ನ ಜೀವನದಲ್ಲಿಯೇ ಮೌಲ್ಯವನ್ನು ಕಾಣದವನು ಇತರರ ಜೀವನಕ್ಕೆ ಬೆಲೆ ಕೊಡಲು ಹೇಗೆ ಸಾಧ್ಯ? ಇಂತಹ ವ್ಯಕ್ತಿಗಳನ್ನೇ ಬಹುಶಃ ಈಶಾವಾಸ್ಯ ಉಪನಿಷತ್ತು, **ಆತ್ಮಹನೋ ಜನಾಃ** – 'ಆತ್ಮಘಾತಕರು' ಎಂದು ಕರೆದಿರುವುದು. ಅಧ್ಯಾತ್ಮ ರಾಮಾಯಣ ಹೀಗೆ ಹೇಳುತ್ತದೆ:

**ಕ್ರೋಧಮೂಲೋ ಮನಸ್ತಾಪಃ ಕ್ರೋಧಃ ಸಂಸಾರಬಂಧನಮ್ ।**
**ಧರ್ಮಕ್ಷಯಕರಃ ಕ್ರೋಧಸ್ತಸ್ಮಾತ್ ಕ್ರೋಧಂ ಪರಿತ್ಯಜ ॥**

**ಕ್ರೋಧ ಏಷ ಮಹಾನ್ ಶತ್ರುಸ್ತೃಷ್ಣಾ ವೈತರಣೀ ನದೀ ।**
**ಸಂತೋಷೋ ನಂದನವನಂ ಶಾಂತಿರೇವ ಹಿ ಕಾಮಧುಕ್ ॥**

"ಮನಸ್ತಾಪಕ್ಕೆ ಮೂಲಕಾರಣವೇ ಕ್ರೋಧ. ಕ್ರೋಧವೇ ಸಂಸಾರ ಬಂಧನ. ಕ್ರೋಧವು ಧರ್ಮವನ್ನು ನಾಶಮಾಡುತ್ತದೆ. ಆದ್ದರಿಂದ ಕ್ರೋಧವನ್ನು ಬಿಡು. ಈ ಕ್ರೋಧವೇ ಮಹಾಶತ್ರು. ಆಸೆಯೇ ವೈತರಿಣೀ ನದಿ. ಸಂತೋಷ ನಂದನವನ. ಶಾಂತಿಯೇ ಎಲ್ಲ ಕಾಮನೆಗಳನ್ನೂ ಈಡೇರಿಸುವಂತಹದು."

ಜೀವನದಲ್ಲಿ ಒಂದು ನಿರ್ದಿಷ್ಟವಾದ ಅರ್ಥವನ್ನು ಕಂಡುಕೊಳ್ಳಲು ಅಸಾಧ್ಯವಾದಾಗ, ಅದಕ್ಕೆ ಪರ್ಯಾಯವಾಗಿ ಕಾಮ ಮತ್ತು ಕ್ರೋಧಗಳು ತೀವ್ರವಾಗಿ ವ್ಯಕ್ತಗೊಳ್ಳುತ್ತವೆ. ವಿಕ್ಟರ್ ಈ. ಫ್ರಾಂಕಲ್ ಎಂಬ ಮನಶ್ಶಾಸ್ತ್ರಜ್ಞರ ಮಾತಿನಲ್ಲಿ ಹೇಳಬೇಕೆಂದರೆ, "ಅಧಿಕಾರಾಸಕ್ತಿ ಮತ್ತು ಭೋಗಾಸಕ್ತಿ ಇವೆರಡೂ ಅರ್ಥಪೂರ್ಣ ಜೀವನದ ಅಸಮರ್ಥತೆಯ ಪರಿಣಾಮಗಳು." ಏಕೆಂದರೆ ಫ್ರಾಂಕಲ್ ಅವರ ಪ್ರಕಾರ, ಜೀವನದಲ್ಲಿ ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನವೇ ಮನುಷ್ಯನಲ್ಲಿರುವ ಪ್ರಧಾನ ಪ್ರೇರಣಾಶಕ್ತಿ. ಇದು ಸರಿಯಾದ ರೀತಿಯಲ್ಲಿ ವ್ಯಕ್ತವಾಗದಿದ್ದರೆ ವಿಕೃತರೂಪವನ್ನು ಪಡೆಯುತ್ತದೆ. ಜೀವನದಲ್ಲಿ ಅರ್ಥಹೀನತೆಯ ಪರಿಣಾಮವಾಗಿ ಉಂಟಾಗುವ ದುಗುಡತೆಯನ್ನು ಮರೆಯಲು ವ್ಯಕ್ತಿಯು ತೀವ್ರ ಭೋಗಾಸಕ್ತನಾಗಬಹುದು, ಅಥವಾ ಅಧಿಕಾರಲಾಲಸೆ ಅವನನ್ನು ಉನ್ಮತ್ತನನ್ನಾಗಿ ಮಾಡಬಹುದು, ಅಥವಾ ಇವೆರಡಕ್ಕೂ ಅಡ್ಡಿ ಆತಂಕಗಳು ಉಂಟಾದಾಗ ದ್ವೇಷಾಸೂಯೆಗಳಿಗೆ ಆತ ಬಲಿಯಾಗಬಹುದು. ನಿರಂತರ ಆಶಾಭಂಗದಿಂದ ವ್ಯಕ್ತಿಯು ತನ್ನನ್ನು ದ್ವೇಷಿಸುತ್ತ, ಜಗತ್ತನ್ನೂ ದ್ವೇಷಿಸತೊಡಗುತ್ತಾನೆ.

ಪಾಶ್ಚಾತ್ಯ ಮನೋವಿಶ್ಲೇಷಣಾಶಾಸ್ತ್ರದಲ್ಲಿ ಮನುಷ್ಯನ ಎರಡು ಪ್ರಧಾನ ಪ್ರವೃತ್ತಿಗಳ ಪ್ರಸ್ತಾಪ ಬರುತ್ತದೆ: ಒಂದು **ಇರೋಸ್** (eros), ಮತ್ತೊಂದು **ಥನಟೋಸ್** (thanatos) – ಒಂದು ಜೀವನಪ್ರವೃತ್ತಿ, ಇನ್ನೊಂದು ಮರಣಪ್ರವೃತ್ತಿ. ಇವನ್ನು ಕ್ರಮವಾಗಿ **ಜಿಜೀವಿಷತ್ವ** ಮತ್ತು **ಮುಮೂರ್ಷತ್ವ** ಎಂದೂ, ಕಾಮ ಮತ್ತು ಕ್ರೋಧ ಎಂದೂ ಕರೆಯಬಹುದು. ಮೊದಲೇ ತಿಳಿಸಿರುವಂತೆ ಮೊದಲನೆಯದು ಜೀವವೃದ್ಧಿಗೆ ಸಂಬಂಧಿಸಿರುವುದು, ಮತ್ತು ಎರಡನೆಯದು ಜೀವಹಾನಿಗೆ ಸಂಬಂಧಿಸಿರುವುದು. ಜ್ಞಾನಿಯು ಇವೆರಡನ್ನೂ ಮೀರಿಹೋಗುತ್ತಾನೆ. ಅವನು ಜೀವನವನ್ನು ಬಯಸುವುದಿಲ್ಲ, ಮರಣವನ್ನೂ ಬಯಸುವುದಿಲ್ಲ. ಒಂದು ಸಂಸ್ಕೃತ ಸುಭಾಷಿತವು ಹೀಗೆ ಹೇಳುತ್ತದೆ:

**ನಾಭಿನಂದೇತ ಮರಣಂ ನಾಭಿನಂದೇತ ಜೀವನಂ ।**
**ಕಾಲಮೇವ ಪ್ರತೀಕ್ಷೇತ ನಿಯಮಂ ಭೃತ್ಯಕೋ ಯಥಾ ॥**

"ಮರಣವನ್ನೂ ಬಯಸಬಾರದು, ಜೀವನವನ್ನೂ ಬಯಸಬಾರದು. ಸೇವಕನಂತೆ ಭಗವದಾಜ್ಞೆಯನ್ನು ಕಾಯುತ್ತಿರಬೇಕು."

ಈ ಕಾಮ ಮತ್ತು ಕ್ರೋಧ ಒಂದೇ ಶಕ್ತಿಯ ಎರಡು ಮುಖಗಳು. ಆದ್ದರಿಂದಲೇ **ಕಾಮ ಏಷ ಕ್ರೋಧ ಏಷ** – "ಅದೇ ಕಾಮ, ಅದೇ ಕ್ರೋಧ" ಎಂದು ಶ್ರೀಕೃಷ್ಣನು ಹೇಳುತ್ತಾನೆ. ಇದು ರಜೋಗುಣದಿಂದ ಉದ್ಭವಿಸುತ್ತದೆ ಎಂದು ಅವನು ಹೇಳುತ್ತಾನೆ. ಇದು ರಜೋಗುಣದಿಂದ ಉದ್ಭವವಾಗಿ ತಮೋಗುಣದಿಂದ ಬೆಳೆಯುತ್ತದೆ. ರಜೋವೃಕ್ಷದಿಂದ ಹುಟ್ಟಿದ ಈ ಬೀಜವು ಫಲವತ್ತಾದ ತಮೋಕ್ಷೇತ್ರದಲ್ಲಿ ಬಿದ್ದು ಹುಲುಸಾಗಿ ಬೆಳೆಯುತ್ತದೆ. ಆದ್ದರಿಂದಲೇ ತಮೋಮೂಲವಾದ ಆಲಸ್ಯದಿಂದ ಕೂಡಿರುವ ವ್ಯಕ್ತಿಗಳಲ್ಲಿ ಭೋಗಾಸಕ್ತಿ ಅಧಿಕವಾಗಿರುತ್ತದೆ. ತಮಸ್ಸಿನ ಪ್ರಭಾವದಿಂದ ವ್ಯಕ್ತಿಯು ಪೂರ್ವಾಪರ ವಿಚಾರವನ್ನು ಕಳೆದುಕೊಳ್ಳುತ್ತಾನೆ. ಆಗ ಸುಲಭವಾಗಿ ಅವನು ಕಾಮ–ಕ್ರೋಧಗಳಿಗೆ ಬಲಿಯಾಗುತ್ತಾನೆ. ಏಕೆಂದರೆ **ಅಜ್ಞಾನಂ ತಮಸಃ ಫಲಂ** – "ಅಜ್ಞಾನವು (ವಿಚಾರಹೀನತೆ) ತಮಸ್ಸಿನ ಫಲ" ಎಂದು ಶ್ರೀಕೃಷ್ಣನು ಮುಂದೆ ಹೇಳುತ್ತಾನೆ. ಅಜ್ಞಾನಸಂಭೂತವಾದ ಕಾಮ ಕ್ರೋಧಗಳು ಜ್ಞಾನವನ್ನು ಆವರಿಸುತ್ತವೆ. ಇವು ಬೇರೆ ಅನೇಕ ಭಾವವಿಕಾರಗಳಿಗೆ ಕಾರಣವಾಗುತ್ತವೆ. ಭಯ, ಚಿಂತೆ, ಆತಂಕ, ದರ್ಪ ಮುಂತಾದ ನಿಷೇಧಾತ್ಮಕ ಭಾವಗಳು ಕಾಮ–ಕ್ರೋಧ ವೃಕ್ಷದ ಅತ್ಯಂತ ಕಹಿ ಫಲಗಳು. ನಾವು ಈ ವೃಕ್ಷವನ್ನು ಸಾಕಿ ಬೆಳೆಸಿದರೆ ಈ ಕಹಿ ಫಲಗಳನ್ನು ಅನುಭವಿಸಲೇಬೇಕಾಗುತ್ತದೆ.

ಇದು ಜ್ಞಾನವನ್ನು ಹೇಗೆ ಆವರಿಸುತ್ತದೆ ಎಂಬುದನ್ನು ಶ್ರೀಕೃಷ್ಣನು ಮೂರು ಸೂಕ್ತ ಉದಾಹರಣೆಗಳ ಮೂಲಕ ವಿವರಿಸುತ್ತಾನೆ. **ಮೊದಲನೆಯ ಉದಾಹರಣೆ ಅಗ್ನಿ.** ಬೆಂಕಿಯನ್ನು ಹೊಗೆಯು ಆವರಿಸುವಂತೆ ಕಾಮ–ಕ್ರೋಧವು ಜ್ಞಾನವನ್ನು ಆವರಿಸುತ್ತದೆ. ಅಗ್ನಿಯ ಮುಖ್ಯ ಗುಣ ಸುಡುವುದು. ಹಾಗೆಯೇ ಜ್ಞಾನವೂ ಎಲ್ಲ ಕರ್ಮಗಳನ್ನೂ ದಹಿಸುತ್ತದೆ – **ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ (೪:೩೭)** – ಅಗ್ನಿಯು ಬೆಳಕನ್ನು ನೀಡುತ್ತದೆ. ಹಾಗೆಯೇ ಜ್ಞಾನವೂ ಬೆಳಕಿನಂತೆ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುತ್ತದೆ. ಅಗ್ನಿಯು ತರಕಾರಿ ಮುಂತಾದವುಗಳನ್ನು ಬೇಯಿಸಿ ಪಕ್ವವಾಗಿಸುತ್ತದೆ. ಅದೇ ರೀತಿ ಜ್ಞಾನವೂ ನಮ್ಮ ವ್ಯಕ್ತಿತ್ವವನ್ನು ಪಕ್ವಗೊಳಿಸುತ್ತದೆ. ಬೆಂಕಿಯ ಆವಿಷ್ಕಾರ ಮಾನವ ನಾಗರಿಕತೆಯ ಮುನ್ನಡೆಗೆ ನಾಂದಿಯಾಯಿತು. ಹಾಗೆಯೇ ಜ್ಞಾನವೂ ಕೂಡ ಪ್ರಗತಿಯ ಅತ್ಯಂತ ಮುಖ್ಯ ಸಾಧನ. ಬೆಂಕಿಯನ್ನು ಧೂಮವು ಆವರಿಸುವಂತೆ ಜ್ಞಾನವನ್ನು ಕಾಮ–ಕ್ರೋಧವು ಆವರಿಸುತ್ತದೆ. ಬೆಂಕಿ ಇರುವಲ್ಲಿ ಧೂಮವು ಇದ್ದೇ ಇರುತ್ತದೆ. ಆದರೆ ತುಂಬ ಹೊಗೆಯಾಡುತ್ತಿದ್ದರೆ ಬೆಂಕಿಯ ಪ್ರಯೋಜನವನ್ನು ನಾವು ಪಡೆಯಲಾಗುವುದಿಲ್ಲ. ಅದೇ ರೀತಿ ಕಾಮ–ಕ್ರೋಧವು ಅತಿಯಾದರೆ ಜ್ಞಾನ ಕಣ್ಮರೆಯಾಗುತ್ತದೆ. ಹೊಗೆಯು ಆವರಿಸಿದರೆ ಯಾವುದನ್ನೂ ಸರಿಯಾಗಿ ಕಾಣಲಾಗುವುದಿಲ್ಲ. ಕಾಮ–ಕ್ರೋಧದ ದೆಸೆಯಿಂದ ಸತ್ಯಾಸತ್ಯತೆಯ ಅರಿವು ನಮಗಾಗುವುದಿಲ್ಲ. ಆಗ ನಾವು ಜೀವನದಲ್ಲಿ ಎಡವುತ್ತೇವೆ. ಬೆಂಕಿಯನ್ನು ಉರಿಸಲು ನಾವು ಸೌದೆಯನ್ನು ಬಳಸುತ್ತೇವೆ ಮತ್ತು ಅದು ಒಣಗಿರಬೇಕು. ಒದ್ದೆಯಾಗಿದ್ದರೆ ಅದು ಹೊಗೆಯನ್ನು ಉಗುಳುತ್ತದೆ. ಹಾಗೆಯೇ ನಮ್ಮ ಜ್ಞಾನವೂ ಸದ್ವಿಷಯವನ್ನು ಅವಲಂಬಿಸಿರಬೇಕು. ಕೆಟ್ಟ, ಅಶ್ಲೀಲ, ಅಸಂಬದ್ಧ, ನಿಷೇಧಾತ್ಮಕ ವಿಷಯಗಳನ್ನು ಅವಲಂಬಿಸಿದ್ದರೆ ಅದು ಅಧಿಕವಾಗಿ ಕಾಮ–ಕ್ರೋಧದ ಹೊಗೆಯನ್ನೇ ಉಗುಳತೊಡಗುತ್ತದೆ.

**ಎರಡನೆಯ ಉದಾಹರಣೆ ಕನ್ನಡಿ.** ಕನ್ನಡಿಯನ್ನು ಧೂಳು ಆವರಿಸುವಂತೆ ಕಾಮ–ಕ್ರೋಧವು ಜ್ಞಾನವನ್ನು ಆವರಿಸುತ್ತದೆ. ಕನ್ನಡಿಯ ಮುಖ್ಯ ಉದ್ದೇಶ, ನಮ್ಮ ಪ್ರತಿಬಿಂಬವನ್ನು ನಾವು ನೋಡುವುದು. ಕನ್ನಡಿಯ ಮೂಲಕ ನಮ್ಮ ಲೋಪದೋಷಗಳ ಅರಿವು ನಮಗುಂಟಾಗುತ್ತದೆ. ಜ್ಞಾನವೂ ಒಂದು ಕನ್ನಡಿ ಇದ್ದಂತೆ. ಇದರ ಮೂಲಕ ನಮ್ಮನ್ನು ನಾವು ಅರಿತುಕೊಳ್ಳುತ್ತೇವೆ. ನಾವು ಒಂದು ವಸ್ತುವನ್ನು ನೋಡುವುದೆಂದರೆ, ಆ ವಸ್ತುವಿಗೆ ಸಂಬಂಧಿಸಿದ ಚಿತ್ತವೃತ್ತಿಯನ್ನು ನೋಡುವುದು. ನಾವು ನೇರವಾಗಿ ಯಾವ ವಸ್ತುವನ್ನೂ ನೋಡುವುದಿಲ್ಲ. ಆ ಚಿತ್ತವೃತ್ತಿಯಲ್ಲಿ ಆತ್ಮದ ಬೆಳಕು ಪ್ರತಿಬಿಂಬಿತವಾಗಿ ಆ ವೃತ್ತಿಯ ಅರಿವಾಗುತ್ತದೆ. ಇಂತಹ 'ವೃತ್ತಿಜ್ಞಾನ'ವನ್ನೇ ನಾವು 'ವಸ್ತುಜ್ಞಾನ'ವೆಂದು ಕರೆಯುವುದು. ನಿಜವಾಗಿ ವಸ್ತು ಹೇಗಿದೆ ಎಂಬುದು ನಮಗೆ ತಿಳಿಯದು. ಆತ್ಮದ ಬೆಳಕೇ ವೃತ್ತಿಯ ಮೂಲಕ ಪ್ರತಿಬಿಂಬಿತವಾಗಿ ವಸ್ತುಜ್ಞಾನವಾಗಿ ನಮಗೆ ಕಂಡುಬರುತ್ತದೆ. ಆದ್ದರಿಂದ ಪ್ರತಿಯೊಂದು ಜ್ಞಾನವೂ ಕೂಡ ಆತ್ಮದ ಪ್ರತಿಬಿಂಬವೇ ಎಂಬುದನ್ನು ಅರಿತಾಗ, ನಾವು ಅಮೃತತ್ತ್ವವನ್ನು ಪಡೆಯುತ್ತೇವೆ ಎಂದು ಕೇನೋಪನಿಷತ್ತು ಸಾರುತ್ತದೆ – **ಪ್ರತಿಬೋಧವಿದಿತಂ ಮತಂ ಅಮೃತತ್ವಂ ಹಿ ವಿಂದತೇ** (ಕೇನೋಪನಿಷತ್ತು, ೨ : ೪).

ಕನ್ನಡಿಯ ಮೇಲೆ ಧೂಳು ಕೂತಿದ್ದರೆ ಅದರಲ್ಲಿ ನಮ್ಮ ಪ್ರತಿಬಿಂಬವು ಮಸುಕಾಗಿ ಕಾಣುತ್ತದೆ, ಬೇರೆ ವಸ್ತುಗಳ ಮತ್ತು ವ್ಯಕ್ತಿಗಳ ಪ್ರತಿಬಿಂಬವೂ ಸರಿಯಾಗಿ ಕಾಣುವುದಿಲ್ಲ. ಇದೇರೀತಿ, ಅವಿದ್ಯೆಯಿಂದ ಉದ್ಭವಿಸುವ ಕಾಮಕ್ರೋಧಾದಿ ಧೂಳು ನಮ್ಮ ಜ್ಞಾನಕನ್ನಡಿಯನ್ನು ಆವರಿಸುತ್ತದೆ. ಆಗ ನಮ್ಮ ಅರಿವೂ ನಮಗಾಗುವುದಿಲ್ಲ ಮತ್ತು ಇತರೆ ವಿಷಯಗಳನ್ನೂ ನಾವು ಸರಿಯಾಗಿ ತಿಳಿದುಕೊಳ್ಳಲು ಆಗುವುದಿಲ್ಲ. ಹೊರಗಿನ ವಾತಾವರಣ, ವ್ಯಕ್ತಿಗಳು ಮತ್ತು ಕಾರ್ಯಕ್ಷೇತ್ರ – ಇವೂ ನಮಗೆ ಕನ್ನಡಿಯಾಗಬಲ್ಲವು. ಇವುಗಳ ಮೂಲಕ ನಮ್ಮ ಲೋಪದೋಷಗಳ ಅರಿವು ನಮಗಾಗಲು ಸಾಧ್ಯ. ಆದರೆ ಕಾಮಕ್ರೋಧಾದಿಗಳು ಮಧ್ಯೆ ಪ್ರವೇಶಿಸಿದರೆ ಈ ಉತ್ತಮ ಅವಕಾಶದಿಂದ ವಂಚಿತರಾಗುತ್ತೇವೆ.

**ಮೂರನೆಯ ಉದಾಹರಣೆ ಗರ್ಭ.** ಗರ್ಭವನ್ನು ಪೊರೆಯು ಆವರಿಸಿರುವಂತೆ ಜ್ಞಾನವನ್ನು ಕಾಮ–ಕ್ರೋಧವು ಆವರಿಸಿದೆ. ಗರ್ಭದಲ್ಲಿ ಶಿಶುವು ಬೆಳೆಯುವಂತೆ ಜ್ಞಾನಗರ್ಭದಲ್ಲಿ ವ್ಯಕ್ತಿತ್ವವು ಬೆಳೆಯುತ್ತದೆ. ಆದರೆ ಈ ಜ್ಞಾನಗರ್ಭವನ್ನು ಕಾಮಕ್ರೋಧವು ಆವರಿಸಿಬಿಟ್ಟರೆ ವ್ಯಕ್ತಿತ್ವದ ಬೆಳವಣಿಗೆ ಕುಂಠಿತವಾಗುತ್ತದೆ. ಪೊರೆಯು ಗರ್ಭಕ್ಕೆ ಒಂದು ರಕ್ಷಣೆಯನ್ನು ನೀಡುತ್ತದೆ. ಆದರೆ ಯಾವಾಗಲೂ ಆ ರಕ್ಷಣೆಯು ಮಿತಿಯಲ್ಲಿ ಇರಲಾಗುವುದಲ್ಲ. ಹಾಗೆಯೇ ಜ್ಞಾನವು ಒಂದು ಮಿತಿಯೊಳಗೆ ಇದ್ದರೆ, ವಿಸ್ತಾರವಾಗದಿದ್ದರೆ ವ್ಯಕ್ತಿತ್ವ ಬೆಳೆಯಲಾರದು. ಅನೇಕವೇಳೆ ನಾವು ನಮ್ಮ ಸೌಲಭ್ಯ ಅನುಕೂಲತೆಗಳ ರಕ್ಷಣೆಯೊಳಗೇ ಇರಲು ಇಷ್ಟಪಡುತ್ತೇವೆ; ಸವಾಲನ್ನು ಎದುರಿಸಲು ಹಿಂಜರಿಯುತ್ತೇವೆ. ಇದರಿಂದ ನಾವು ಬೆಳವಣಿಗೆಯಿಂದ ವಂಚಿತರಾಗುತ್ತೇವೆ. ನಾವು ಯಾವಾಗಲೂ ನಮ್ಮ 'ಸೌಲಭ್ಯವಲಯ' ದಿಂದ (comfort zone) ಹೊರಬರಲು ಇಷ್ಟಪಡಬೇಕು. ಇನ್ನೊಂದು ಅರ್ಥದಲ್ಲಿ ಶಿಶುವನ್ನೇ ಜ್ಞಾನವೆಂದು ತೆಗೆದುಕೊಂಡರೆ, ಜ್ಞಾನವು ಮೊದಲು ಸಂಕುಚಿತವಾಗಿದ್ದು, ಅನಂತರ ಹೊರಪ್ರಪಂಚಕ್ಕೆ ತೆರೆದುಕೊಂಡಷ್ಟೂ ಅದು ವಿಸ್ತಾರವಾಗಿ ಬೆಳೆಯುತ್ತ ಹೋಗುತ್ತದೆ. ಶಿಶುವು ತಂದೆತಾಯಿಗಳ ದೇಹಸಾರವಾಗಿರುವಂತೆ ಜ್ಞಾನವೂ ಒಟ್ಟು ಸಾಧನೆಗಳ ಅನುಭವಗಳ ಸಾರ – ತಾತ್ಪರ್ಯ. ಶ್ರೀಕೃಷ್ಣನು ಮುಂದೆ ಹೇಳುವಂತೆ, **ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ** – "ಎಲೈ ಅರ್ಜುನ, ಎಲ್ಲ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಗೊಳ್ಳುತ್ತದೆ" (೪:೩೩). ಶಿಶುವು ಗರ್ಭದ ಪೊರೆಯನ್ನು ಹರಿದುಕೊಂಡು ಹೊರಬರುವಂತೆ ಜ್ಞಾನವೂ ಕೂಡ ಅಜ್ಞಾನಸಂಭೂತವಾದ ಕಾಮಕ್ರೋಧಾದಿಗಳ ಆವರಣವನ್ನು ಭೇದಿಸಿ ಹೊರಬರಬೇಕು.

ಕಾಮ ಮತ್ತು ಕ್ರೋಧಗಳ ಜೊತೆಗೆ ಲೋಭವನ್ನೂ ಸೇರಿಸಿ, ಇವು ಮೂರೂ ನರಕದ್ವಾರಗಳೆಂದು ಶ್ರೀಕೃಷ್ಣನು ಹೇಳುತ್ತಾನೆ:

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಕ್ರೋಧಸ್ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್ ॥**

"ಕಾಮ, ಕ್ರೋಧ ಮತ್ತು ಲೋಭ – ಈ ಮೂರೂ ಆತ್ಮನಾಶಕವಾದ ಮೂರು ಬಗೆಯ ನರಕದ್ವಾರಗಳು. ಈ ಮೂರನ್ನೂ ತ್ಯಜಿಸಬೇಕು." (೧೬ : ೨೧)

ಈ ಮೂರೂ ಒಂದೇ ನಿಷೇಧಾತ್ಮಕ ಶಕ್ತಿಯ ವಿವಿಧ ರೂಪಗಳು, ಮಂಜುಗಡ್ಡೆ, ನೀರು ಮತ್ತು ಆವಿ – ಇವು ಒಂದೇ ವಸ್ತುವಿನ ಮೂರು ರೂಪಗಳಾಗಿರುವಂತೆ. ಕೆಲವೊಮ್ಮೆ ಈ ಶಕ್ತಿಯು ಲೋಭದಂತೆ ಗಟ್ಟಿಯಾಗುತ್ತದೆ. ಆಗ ವ್ಯಕ್ತಿಯು ತನ್ನಲ್ಲಿರುವುದನ್ನು ತಾನೂ ಅನುಭವಿಸದೆ, ಇತರರಿಗೂ ನೀಡುವುದಿಲ್ಲ. ಮತ್ತೆ ಕೆಲವು ಬಾರಿ ಆ ಶಕ್ತಿಯು ಕಾಮದಂತೆ ನೀರಾಗಿ ಹರಿಯುತ್ತದೆ. ಇನ್ನು ಕೆಲವು ಸಾರಿ ಕೋಪವಾಗಿ ಹೊಗೆಯಾಡುತ್ತದೆ.

ಲೋಭವು ಮನವಸಹಜವಾದ ಪ್ರವೃತ್ತಿಯಾಗಿದೆ. ಕಾಮವು ದೇವತೆಗಳ ಹುಟ್ಟುಗುಣ ಮತ್ತು ಕ್ರೋಧವು ಅಸುರರ ಸ್ವಭಾವ. ಈ ಮೂರೂ ವರ್ಗದ ವ್ಯಕ್ತಿಗಳು ಒಮ್ಮೆ ಪ್ರಜಾಪತಿಯಿಂದ ಉಪದೇಶ ಪಡೆಯಹೋದರು. ಪ್ರಜಾಪತಿಯು ಉದ್ದನೆಯ ಉಪನ್ಯಾಸವನ್ನು ನೀಡಲಿಲ್ಲ. ಒಂದು ವಾಕ್ಯವನ್ನಾಗಲಿ, ಒಂದು ಪದವನ್ನಾಗಲಿ ಉಪದೇಶ ರೂಪದಲ್ಲಿ ಹೇಳಲಿಲ್ಲ. ಅವನು ಏಕಾಕ್ಷರೀ ಉಪದೇಶವನ್ನು ನೀಡಿದನು. ಆ ಏಕಾಕ್ಷರ ಯಾವುದೆಂದರೆ **'ದ'**. ಆ ಮೂರು ಬಗೆಯ ವ್ಯಕ್ತಿಗಳು ತಮ್ಮ ಪ್ರಕೃತಿಗೆ ಅನುಗುಣವಾಗಿ, ಅದೃಷ್ಟವಶಾತ್ ಉದಾತ್ತರೀತಿಯ ಅರ್ಥವನ್ನೇ ಕಲ್ಪಿಸಿಕೊಂಡರು. ಮನುಷ್ಯನು ತುಂಬ ಲೋಭಿ, ಎಲ್ಲವನ್ನೂ ಕೂಡಿಸಿಟ್ಟುಕೊಳ್ಳುವ ಸ್ವಭಾವ ಅವನದು. ಅಧಿಕಾರ, ಹಣ, ವಸ್ತು ಮತ್ತು ವ್ಯಕ್ತಿ – ಎಲ್ಲವೂ ತನ್ನದಾಗಿರಬೇಕು, ಇತರರಿಗೆ ದಕ್ಕಬಾರದು; ಏನನ್ನಾದರೂ ಕಳೆದುಕೊಂಡರೆ ತನ್ನನ್ನೇ ಕಳೆದುಕೊಂಡಷ್ಟು ಸಂಕಟವಾಗುತ್ತದೆ ಅವನಿಗೆ. ಇದು ಅಂತರಿಕ